ಅವರು ತಮ್ಮ ಸಾಹಿತ್ಯ ವಿಮರ್ಶೆಯ ಪರಿಕರಗಳನ್ನು ರೂಪಿಸಿಕೊಳ್ತಾ ಇರೋವಾಗಲೂ ಇದಿತ್ತು. ಅವರಿಗೂ ಎಲ್ಲವುಗಳ ಅಧ್ಯಯನವಿತ್ತು. ಆದರೆ ವಿಮರ್ಶೆ ಮಾತ್ರ ವಿಭಿನ್ನ ದಾರಿ ಹಿಡಿದಿತ್ತು. 'ಸರೋವರದ ಸಿರಿಗನ್ನಡಿ'ಯಲ್ಲಿ ಲೇಖನ ನೋಡಿ. ಯಾಕೆ ಅಂತರ್‌ಪಠ್ಯೀಯತೆ ಬಗ್ಗೆ ಮಾತಾಡ್ತಾರವರು. ಅಂದ್ರೆ ಹಲವು ಕಾವ್ಯಗಳ ಸರೋವರದ ಸಿರಿಗನ್ನಡಿಯಲ್ಲಿ ಏನನ್ನೋ ಹುಡುಕ್ತಾ ಇದ್ದಾರವರು. ಪುತಿನ ಕೂಡ ಕೃತಿಯ ಶರೀರವನ್ನೇ ಬಳಸಿ ಮಾತಾಡ್ತಾರೆ. ಇದಕ್ಕೆಲ್ಲ ಅವರು ವೆಸ್ಟ್‌ನ ಮಾದರಿಗಳನ್ನು ಬಳಸ್ತಾ ಇಲ್ಲ. ಕೃತಿಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಬೇಕಾದ ತಿಳಿವಳಿಕೆಯ ನೆಲೆಗಳು ಕೃತಿಯ ಒಳಗೇನೆ ಇರ್ತವೆ. ವೆಸ್ಟ್‌ನ ಮಾದರಿಗಳ ಅಗತ್ಯ ಇಲ್ಲ ನಮಗೆ. ನಾನು ಯಾವುದನ್ನು ದೇಸೀಯವಾದ ನೆಲೆಗಳು ಅಂತ ಕರೀತಿದ್ದೀನೊ ಅವು ಕೃತಿಯ ಒಳಗೇನೆ ಇರೋ ನೆಲೆಗಳು. ರಾಜೇಂದ್ರ ಚೆನ್ನಿ ಕೂಡ ಇಂಥದ್ದೇ ಒಂದು ಪ್ರಶ್ನೆಯನ್ನು ಕೇಳಿದ್ರು; 'ಕೆವಿಎನ್ ಬರೆದಿರೋದು ಚೆನ್ನಾಗಿದೆ. ಆದ್ರೆ ಇವರ ಥಿಯೆರಿ ಏನು?' ಅಂತ. ಅನಂತಮೂರ್ತಿ ನನ್ನನ್ನು ಡಿಕನ್‌ಸ್ಟ್ರಕ್ಷನಿಸ್ಟ್ (ನಿರಚನವಾದಿ) ಅಂತ ಹೇಳಿದ್ರು, ಇನ್ನು ಕೆಲವರು ನನ್ನನ್ನು ರಿವೈವಲಿಸ್ಟ್ ಅಂತ ಕರೆದ್ರು. ಹಳೆಯದಕ್ಕೆ ಹಿಂತಿರುಗಬೇಕು ಅಂತ ಹೇಳ್ತಾ ಇದ್ದಾರೆ ಅನ್ನೋದು ಅವರ ಟೀಕೆಯಾಗಿತ್ತು. ಕೇಶವಶರ್ಮ ಅವರು ಮೂಲಭೂತವಾದ ಅಂತ ಬರೆದ್ರು. ಮೂಲಭೂತವಾದಿ ಅಂದ್ರೆ ನಮ್ಮ ಹತ್ತಿರ ಇರೋದೆ ಸಾಕು, ಇದ್ರಿಂದಲೇನೆ ಜೀವನ ಮಾಡ್ತಾರಿವರು. ಬೇರೆಯದನ್ನ ಸ್ವೀಕರಿಸೋದಿಲ್ಲ ಅನ್ನೋ ಅರ್ಥದಲ್ಲಿ.

◆ **ಅನ್ಯ ಪ್ರಭಾವಗಳ ಕುರಿತು ಮಾತಾಡ್ತಾ ಕಾವ್ಯಮೀಮಾಂಸೆಯ ಬಗೆಗೂ ಬರೆದಿರುವಿರಿ. ಕಾವ್ಯಮೀಮಾಂಸೆ ಕೂಡ ಅನ್ಯ ಪ್ರಭಾವವೇ ಆಗಿದೆ ಎನ್ನುವುದು ನಿಮ್ಮ ವಾದವಾಗಿತ್ತು. ಅಂದ್ರೆ, ಅದು ಸಂಸ್ಕೃತ ಕಾವ್ಯಮೀಮಾಂಸೆ. ಆದರೆ ಇದರಲ್ಲಿ ಧ್ವನಿಗೆ ರಿಯಾಯತಿ ಕೊಡಬಹುದು ಅಂತ. ಈ ಧ್ವನಿಗೆ ಮಾತ್ರ ಯಾಕೆ ರಿಯಾಯತಿ ಕೊಡಬೇಕನಿಸ್ತು?**

ನಾನು ಆಮೇಲೆ ಈ ಅಭಿಪ್ರಾಯವನ್ನ ಬದಲಾಯಿಸಿಕೊಂಡೆ. ಧ್ವನಿಯನ್ನು ಕೂಡ ಒಪ್ಪಿಲ್ಲ ನಾನು. ಇದು ಕೂಡ ಹೊಂದಲ್ಲ. ಯಾಕೆಂದ್ರೆ ಇಟ್ ಈಸ್ ಆಲ್ಸೊ ನಾಟ್ ಟೆಸ್ಟೆಡ್. 1974ರಲ್ಲಿ ಥೀಸಿಸ್ ಬರೆದು ಮುಗಿಸಿದಾಗ್ಲೂ ಆ ಪ್ರಶ್ನೆ ನನ್ನಲ್ಲಿ ಉಂಟಾಗಿತ್ತು. ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಹೋದಮೇಲೆ ಈ ಕುರಿತು ಬರೆದೆ. ಈ ಧ್ವನಿ ಸಿದ್ಧಾಂತ ಕೂಡ ಯುನಿವರ್ಸಲ್ ಅಲ್ಲ. ಧ್ವನಿ ಅನ್ನೋದು ಪ್ರಾಸೆಸ್ ಕುರಿತು ಹೇಳುತ್ತೆ. ರಸ ಅನ್ನೋದು ಪ್ರಾಡಕ್ಟ್ ಕುರಿತು ಹೇಳುತ್ತೆ. ಸಹೃದಯನಿಗೆ ಉಂಟಾಗುವ ಅನುಭವವಿದು. ಅನುಭವ ಉಂಟಾಗೋದಕ್ಕೆ ಕಾರಣ ಧ್ವನಿ. ಈ ಪ್ರಾಸೆಸ್ ಧ್ವನಿ. ಅಂದ್ರೆ ಕೃತಿಯನ್ನು ವಿಶ್ಲೇಷಣೆ ಮಾಡೋರಿಗೆ ಪರಿಕರಗಳು ಸಿಗೋದು ಪ್ರಾಸೆಸ್‌ನಿಂದ. ಪ್ರಾಡಕ್ಟ್ ಏನಾಗ್ತದೆ ಅನ್ನೋದನ್ನ ಹೇಳಲಿಕ್ಕೆ ಆಗೋದಿಲ್ಲ. ಉದಾಹರಣೆಗೆ, ಮಹಾಭಾರತದ ಪ್ರಧಾನ ರಸ ಶಾಂತ. ರಾಮಾಯಣದ ಪ್ರಧಾನ ರಸ ಕರುಣ. ಕಾಂಟ್ ಬಿ ಟೆಸ್ಟೆಡ್. ಸಮಸ್ಯೆ ಏನು ಅಂತಂದ್ರೆ, ಇಡಿಯಾಗಿ ರಾಮಾಯಣವನ್ನ ಯಾರೂ ಓದೋದು ಇಲ್ಲ, ಕೇಳೋದು ಇಲ್ಲ. 'ಪ್ರಬಂಧ ರಸ' ಅಂತ ಒಂದಿದೆ. ಅಂದ್ರೆ ಇಡಿಯಾಗಿ ಓದಿದಾಗ ನಿಮ್ಮಲ್ಲಿ ಯಾವ ರಸ ಉಂಟಾಗ್ತದೆಯೊ ಅದು. ಪ್ರಧಾನ ರಸ ನಮ್ಮಲ್ಲಿ ಕೊನೆಗೆ ನಿರುಪಯುಕ್ತವಾಗಿದೆ. ನಾಟಕಕ್ಕೆ ಇರಬಹುದು, ಮೂರ್‍ನಾಲ್ಕು ಗಂಟೆಗಳ ವಾಚನ ನಾಟಕಕ್ಕಿರುವುದರಿಂದ, ಅದು ಎಕ್ಸ್‌ಪೀರಿಯೆನ್ಶಿಯಲ್ ಪಾರ್ಟ್ ಆಗಿಬಿಡ್ತದೆ. ಆದ್ರೆ ಶ್ರವ್ಯಕಾವ್ಯಗಳನ್ನ ಆ ರೀತಿ ಓದೋದಕ್ಕಾಗುವುದಿಲ್ಲ. ಹೀಗಾಗಿ ಅವುಗಳಲ್ಲಿ ರಸದ ಕಲ್ಪನೆ ಇಂಪ್ರಾಕ್ಟಿಕಲ್. ಪ್ರಸಂಗಗಳಲ್ಲಿ ಇದನ್ನ ದಕ್ಕಿಸಿಕೊಳ್ಳಬಹುದು. ಇಲ್ಲಿ ಶೃಂಗಾರ ಇದೆ, ಇಲ್ಲಿ ಹಾಸ್ಯ ಇದೆ ಅಂತ. ಆದ್ರೆ ಒಟ್ಟು ಕಾವ್ಯವನ್ನು ಓದುವುದರಿಂದ ಸಿಗುವ ರಸಪ್ರಜ್ಞೆ ಇದೆಯಲ್ಲ ಅದಾವುದು? ಈಗ ಯಾರೂ ಕೂಡ ಹೆಚ್ಚು ಚರ್ಚೆ ಮಾಡದೇ ಇರುವ ಒಂದು ಪುಸ್ತಕ ಇದೆ – 'ಸಂಸ್ಕೃತ್ ಪೊಯೆಟಿಕ್ಸ್' ಅಂತ. ಅದನ್ನ ಬರೆದವರು ಕೇರಳದ ಕೃಷ್ಣ ಚೈತನ್ಯ. ತೌಲನಿಕ ಸಾಹಿತ್ಯ ಅಧ್ಯಯನದ ದೃಷ್ಟಿಯಿಂದ ತುಂಬಾ ಮಹತ್ವದ ಕೃತಿ ಅದು. ಇಲ್ಲಿನ ವಾದ ಏನಂದ್ರೆ, ಇಡೀ ರಾಮಾಯಣ ಸಪರೇಶನ್‌ಗಳ ಕುರಿತು ಹೇಳ್ತಿದೆ ಅಂತ. ಅನೇಕ ಸಪರೇಶನ್‌ಗಳ ಗುಚ್ಛವದು. ಕ್ರೌಂಚ ಪಕ್ಷಿಗಳ ಸಪರೇಶನ್‌ನಿಂದ ಹಿಡಿದು ಅನೇಕ ಸಪರೇಶನ್‌ಗಳಿವೆ ಇದರಲ್ಲಿ. ಪ್ರೇಮಿಗಳ ನಡುವೆ, ಗಂಡ ಹೆಂಡಿರ ನಡುವೆ,